**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ ಸಿ ಸಂಃ 613 -2019**

| | | |
|---|---|---|
| ಸಾಕ್ಷಿಯ ಹೆಸರುಃ | ಡಾ. ಕೆ. ರಾಮೇಶ್ವರಪ್ಪ | ಪ್ರಾಸಾಃಃ 01 |
| ತಂದೆ/ಗಂಡನ ಹೆಸರುಃ | ಕಾಳಪ್ಪ | ಚಾಸಾಃಃ 01 |
| ವಯಸ್ಸುಃ | ವರ್ಷ 57 | ಪ್ರಮಾಣೀಕರಿಸಿದ ದಿಃ 16.12.2019 |
| ಉದ್ಯೋಗಃ | ಜಂಟಿ ನಿರ್ದೇಶಕ, ಆಹಾರ ನಾಗರೀಕ ಸರಬರಾಜು ಇಲಾಖೆ. | |
| ವಾಸ ಸ್ಥಳಃ | ಬಳ್ಳಾರಿ ಜಿಲ್ಲೆ. | |

**ಮುಖ್ಯ ವಿಚಾರಣೆಃ ಹಿಸಸಅ ರಿಂದಃ**

ದಿಃ 2013 ರ ಅಕ್ಟೋಬರ್ ನಿಂದ ಜುಲೈ 2018 ರವರೆಗೆ ಮೈಸೂರು ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸಿರುತ್ತೇನೆ.

18.6.2016 ರಂದು ಪಿರಿಯಾಪ್ಟಣ ತಾ. ಬೆಟ್ಟದಪುರ ವ್ಯಾಪ್ತಿಯಲ್ಲಿ ಇಲಾಖೆಗೆ ಸಂಬಂಧಿಪಟ್ಟ ವಿಷಯಗಳ ಮೇಲೆ ಪರಿಶೀಲನೆ ನಡೆಸುತ್ತಿರುವ ವೇಳೆ ಬೆಟ್ಟದಪುರ ಹೋಬಳಿ , ಹತ್ತಿಗೂಡು ಗ್ರಾಮದಲ್ಲಿ ಪ್ರಕಾಶಶೆಟ್ಟಿ ಎಂಬುವವರ ಮಗ ಪ್ರಶಾಂತ ಎಂಬುವವರು ಸರ್ಕಾರ ಅನ್ನಭಾಗ್ಯ ಯೋಜನೆಯಲ್ಲಿ ಪಡಿತರ ಚೀಟಿಯಲ್ಲಿ ಬಿಡುಗಡೆ ಮಾಡಿರುವ ಅಕ್ಕಿಯನ್ನು ಅಕ್ರಮವಾಗಿ ಖರೀದಿಸಿ ಅವರ ಮನೆಯಲ್ಲಿ ದಾಸ್ತಾನು ಮಾಡಿ ಹೆಚ್ಚಿನ ಬೆಲೆಗೆ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವ ಮಾಹಿತಿಯ ಮೇರೆಗೆ ನಾನು ತಕ್ಷಣ ಪಿರಿಯಾಪಟ್ಟಣ ತಾ. ಚಾಸಾ-02 ಮತ್ತು 03 ರವರಿಗೆ ಮಾಹಿತಿ ನೀಡಿ ಅತ್ತಿಗೋಡಿನಲ್ಲಿ ದಾಳಿ ನಡೆಸಲು ಸಹಕರಿಸಲು ಸೂಚಿಸಿದ್ದು, ನಂತರ ನಾನು ಆರೋಪಿಯ ಮನೆಯ ಪತ್ತೇ ಹಚ್ಚಿ ಅಲ್ಲಿ ನಡೆಯುತ್ತಿದ್ದ ಚಟುವಟಿಕೆಗಳನ್ನು ವೀಕ್ಷಿಸುತ್ತಿದ್ದಾಗ, ನಾನು ಇದ್ದ ಅತ್ತಿಗೋಡು ಸ್ಥಳಕ್ಕೆ ಅವರಿಬ್ಬರೂ, ಪಂಚರರಾದ ಚಾಸಾ-4 ರಿಂದ 06 ರವರನ್ನು ಸಹ ಕರೆದುಕೊಂಡು ಸಮಯ ಮಃ 2.30 ಗಂಟೆಗೆ ಬಂದಿರುತ್ತಾರೆ. ನಂತರ ದಾಳಿಯ ವಿಷಯವನ್ನು ಚಾಸಾ-2 ರಿಂದ 6 ರವರಿಗೆ ತಿಳಿಸಿ ಅವರೊಂದಿಗೆ ಅತ್ತಿಗೋಡಿನ ಕೇರಳಾಪುರ ರಸ್ತೆಯಲ್ಲಿರುವ ಮಾಹಿತಿ ಇದ್ದ ಒಂದು ಮನೆಯ ಮೇಲೆ ದಾಳಿ ಮಾಡಿ ಆಗ ಮನೆಯ ಮುಂದೆ ಒಂದು ಬೊಲೆರೋ ವಾಹನ ಸಂಖ್ಯೆಃ ಕೆಎ 45-5143 ಅಲ್ಲಿ ನಿಂತಿದ್ದು, ಅದನ್ನು ಪರಿಶೀಲನೆ ಮಾಡಲಾಗಿ ಅದರಲ್ಲಿ ತುಂಬಿದ ಚೀಲಗಳಿದ್ದು, ಮನೆಯಲ್ಲಿ ಯಾರು ಮಾಲೀಕರಿದ್ದೀರಿ ಎಂದು ಕೇಳಿದಾಗ ಆರೋಪಿ ಪ್ರಶಾಂತ್ ರವರು ಈ ಮನೆಯ ಮಾಲೀಕ ಎಂದು ತಿಳಿಸಿದ್ದು, ಬೊಲೇರೋ ವಾಹನದಲ್ಲಿ ಅಕ್ಕಿ, ಹಾಗೂ ಗೋದಿ ಇರುವುದನ್ನು ತಿಳಿಸಿರುತ್ತಾರೆ. ಈ ಅಕ್ಕಿ ಯಾವುದು ಎಂದು ಕೇಳಿದಾಗ ಆರೋಪಿಯು ಚಿಕ್ಕಹನುಸೋಗೆ-ದೊಡ್ಡಹನುಸೋಗೆ ಗ್ರಾಮದ ಪಡಿತರ ಚೀಟಿದಾರರಿಂದ ಪ್ರತಿ ಕೆ.ಜಿ.ಗೆ 8 ರಿಂದ 10 ರೂ. ಗಳಂತೆ ಖರೀದಿ ಮಾಡಿ, ಅದನ್ನು ನುಚ್ಚು ಮಾಡಿ ಪಶುಆಹಾರವನ್ನಾಗಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ತಂದಿರುತ್ತೇನೆ ಎಂದು ತಿಳಿಸಿರುತ್ತಾರೆ.

ಆಗ ವಾಹನವನ್ನು ಪರಿಶೀಲಿಸಿದಾಗ 13 ಚೀಲದಲ್ಲಿ ಅಕ್ಕಿ, 11 ಚೀಲದಲ್ಲಿ ಗೋಧಿ ಇರುವುದು ಕಂಡು ಬಂದಿರುತ್ತದೆ. ಅನಂತರ ಮನೆಯನ್ನು ಪರಿಶೀಲಿಸಿದಾಗ ಅಲ್ಲಿ ಕೋಣೆಗಳಲ್ಲಿ 11 ಚೀಲ ಅಕ್ಕಿ, 16 ಚೀಲ ಗೋಧಿ ಇರುವುದು ಕಂಡು ಬಂದಿರುತ್ತದೆ. ಅಂತೆಯೇ ಅವರ ಬಳಿ ಎರಡು ಎಲೆಕ್ಟ್ರಾನಿಕ್ ವಿದ್ಯೂಮ್ಮಾನ ತೂಕಮಾಪಕ ಇರುವುದು ಕಂಡುಬಂದಿರುತ್ತದೆ. ಅವುಗಳನ್ನು ತೂಕ ಮಾಡಿ ನೋಡಿರುತ್ತೇವೆ.

ನಂತರ ಸದರಿ ಕೃತ್ಯವೂ ಕಾನೂನು ಬಾಹೀರವಾಗಿದ್ದರಿಂದ, 02.45 ರಿಂದ 5 ರವರೆಗೆ ಮಹಜರ್ ಕ್ರಮವನ್ನು ನಾನು ಮತ್ತು ಚಾಸಾ-02, 4 ರಿಂದ 06, ಪ್ರಾಸಾ-01 ರವರ ಸಮಕ್ಷಮ ಜರುಗಿಸಿ, ಆರೋಪಿಯ ವಶದಿಂದ ಬೊಲೇರೋ ವಾಹನ ಮತ್ತು ಎಲೆಕ್ಟ್ರಾನಿಕ್ ವಿದ್ಯೂಮ್ಮಾನ ತೂಕಮಾಪಕ, 24 ಚೀಲ ಅಕ್ಕಿ, 27 ಚೀಲ ಗೋಧಿಯನ್ನು ವಶಪಡಿಸಿಕೊಂಡಿರುತ್ತೇವೆ. ನಂತರ ವಶಪಡಿಸಿಕೊಂಡ ಅಕ್ಕಿ ಮತ್ತು ಗೋಧಿಯನ್ನು ಚೀಲಗಳಿಂದ ಮಾದರಿಗಾಗಿ ತಲಾ ½ ಕೆ.ಜಿ.ಯ 4 ಪ್ಯಾಕೆಟ್ಗಳನ್ನು ತೆಗೆದು, ಅದರಲ್ಲಿ ತಲಾ 2 ಪ್ಯಾಕೆಟ್ಗಳನ್ನು ಪೊಲೀಸ್ ರವರಿಗೆ ದೂರು ನೀಡುವ ಸಂದರ್ಭದಲ್ಲಿ ಹಾಜರುಪಡಿಸಿರುತ್ತೇವೆ. ಸದರಿ ಸಂದರ್ಬದಲ್ಲಿ ಸ್ಯಾಂಪಲ್ಗಾಗಿ ತೆಗೆದ ಪ್ಯಾಕೆಟ್ಗಳನ್ನು ಬಿಳಿ ಪಟ್ಟೆಯಿಂದ ಸುತ್ತಿ ಅರಗು ಹಾಕಿ **ಪಿಆರ್ ಒ** ಎಂಬ ಅಕ್ಷರಗಳಿಂದ ಸೀಲು ಹಾಕಿ, ಬಿಳಿ ಹಾಳೆಯ ಮೇಲೆ ಪಂಚರರ ಸಹಿಗಳನ್ನು ಪಡೆದು ಅಂಟಿಸಿರುತ್ತೇವೆ. ಉಳಿದ ತಲಾ 2 ಪ್ಯಾಕೆಟ್ಗಳನ್ನು ನಮ್ಮ ವಶದಲ್ಲಿಯೇ ಜಿಲ್ಲಾಧಿಕಾರಿಗಳಿಗೆ ಹಾಜರುಪಡಿಸುವ ಉದ್ದೇಶದಿಂದ ಇರಿಸಿಕೊಂಡಿರುತ್ತೇವೆ. ಅದೇ ಸಮಯದಲ್ಲಿ ಸ್ಥಳದಲ್ಲಿ ನಾನು ಆರೋಪಿಯ ಹೇಳಿಕೆಯನ್ನು ನೀಡಿರುತ್ತಾರೆ. ನಂತರ ವಶಪಡಿಸಿಕೊಂಡ ಅಕ್ಕಿ ಮತ್ತು ಗೋಧಿಯನ್ನು , ಎರಡು ತೂಕಮಾಪಕವನ್ನು ಪಿರಿಯಾಪಟ್ಟಣ, ಟಿ.ಎ.ಪಿ.ಸಿ.ಎಂ.ಎಸ್. ಕಾರ್ಯಾದರ್ಶಿರವರಿಗೆ ಭದ್ರತೆಯ ದೃಷ್ಟಿಯಿಂದ ವಹಿಸಿ ಸ್ವೀಕೃತಿಯನ್ನು ಪಡೆದಿರುತ್ತೇನೆ. ನಂತರ ವಾಹನ ಮತ್ತು ತಲಾ ಎರಡು ಸ್ಯಾಂಪಲ್ ಪ್ಯಾಕೆಟ್ಗಳನ್ನು ಬೆಟ್ಟದಪುರ ಪೊಲೀಸರ ವಶಕ್ಕೆ ನೀಡಿರುತ್ತೇನೆ. ನಂತರ ಬೆಟ್ಟದಪುರ ಪೋಲೀಸ್ ಠಾಣೆಗೆ ಅಗತ್ಯ ವಸ್ತುಗಳ ಕಾಯ್ದೆ ಅಡಿಯಲ್ಲಿ ದೂರನ್ನು ನೀಡಿರುತ್ತೇನೆ. ನಂತರ ವಾಹನ ಮತ್ತು ಮಾದರಿ ಪ್ಯಾಕೆಟ್ಗಳನ್ನು ಪಂಚರರಾದ ಚಾಸಾ-13 ಮತ್ತು ಚಾಸಾ-16 ರವರ ಸಮಕ್ಷಮ ಪೊಲೀಸರು ಮಹಜರ್ ಕ್ರಮ ಜರುಗಿಸಿ ಅವುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ ಬೆಟ್ಟದಪುರ ಪೊಲೀಸರು ಮುಂದಿನ ಕ್ರಮವನ್ನು ಜರುಗಿಸಿರುತ್ತಾರೆ.

ನಿ.ಪಿ.01 ರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿ.ಪಿ.01(ಬಿ) ಎಂದು ಗುರುತಿಸಲಾಯಿತು. ಆರೋಪಿಯ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.02 ಎಂದು, ಸಾಕ್ಷಿ ಸಹಿಯನ್ನು ನಿ.ಪಿ.02(ಎ) ಎಂದು ಗುರುತಿಸಲಾಯಿತು. ಟಿ.ಎ.ಪಿ.ಸಿ.ಎಂ.ಎಸ್. ರವರು ನೀಡಿದ ದಾಸ್ತಾನು ಸ್ವೀಕೃತಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು,ಅದನ್ನು ನಿ.ಪಿ.0 ಎಂದು, ಸಾಕ್ಷಿ ಸಹಿಯನ್ನು ನಿ.ಪಿ.03(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನೀಡಿದ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.04 ಎಂದು, ಸಾಕ್ಷಿ ಸಹಿಯನ್ನು ನಿ.ಪಿ.04(ಎ) ಎಂದು ಗುರುತಿಸಲಾಯಿತು. ಠಾಣೆಯಲ್ಲಿ ಪೊಲೀಸರು ಜರುಗಿಸಿದ ಅಮಾನತ್ತು ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.05 ಎಂದು, ಸಾಕ್ಷಿ ಸಹಿಯನ್ನು

ನಿ.ಪಿ.05(ಎ) ಎಂದು ಗುರುತಿಸಲಾಯಿತು. ಅಮಾನತ್ತುಪಡಿಸಿದ ಬೊಲೇರೋ ವಾಹನದ ಪೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.06 ಎಂದು, ಅದರಿ ಭಾವ ಚಿತ್ರಕ್ಕೆ ಸಂಬಂಧಿಸಿದ ಸಿ.ಡಿ.ಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.07 ಎಂದು ಗುರುತಿಸಲಾಯಿತು.

ಮಾದರಿಗಾಗಿ ವಶಪಡಿಸಿಕೊಂಡ ತಲಾ ಎರಡು ಅಕ್ಕಿಯ ಮತ್ತು ಗೋದಿಯ ಪ್ಯಾಕೆಟ್ಗಳನ್ನು ಮು.ಮಾ.01 ರಿಂದ 04 ಎಂದು, ಉಳಿದ ಅಕ್ಕಿ ಮತ್ತು ಗೋಧಿಯ ಮೂಟೆಗಳನ್ನು ತೂಕಮಾಪ ಕಗಳನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯನ್ನು ಈ ದಿನ ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತೇನೆ.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ ಸಿ.ಎಸ್.ಎಂ. ವಕೀಲರಿಂದಃ</u>**

ವಕೀಲರು ನ್ಯಾಯಾಲಯದ ಕಲಾಪಗಳಿಂದ ಬಹಿಷ್ಕರಿಸಿದ್ದರಿಂದ ಪಾಟೀಸವಾಲು ಮುಂದೂಡಲಾಯಿತು.

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ. ಹಾಗೂ ಪ್ರ.ವ.ನ್ಯಾ.ದಂ.**
**ಪಿರಿಯಾಪಟ್ಟಣ.**